ರಾಜ್ಯದ ಹೊಸ ಕೃಷಿ ನೀತಿ ಕುರಿತು.

454-ಶ್ರೀ ಡಿ.ಆರ್. ಪಾಟೀಲ್ (ಗದಗ್): ಮಾನ್ಯ ಕೃಷಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೊಸ ಕೃಷಿ ನೀತಿಯನ್ನು ಎಂದು ಪ್ರಕಟಿಸಲಾಗುವುದು.

ಆ) ಹೊಸ ಕೃಷಿ ನೀತಿಯಲ್ಲಿ ನೈಸರ್ಗಿಕ ಕೃಷಿ ಪದ್ಧತಿಗೆ ಸೂಕ್ತವಾದ ಆದ್ಯತೆ ನೀಡಲಾಗಿದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಕರಡು ಕೃಷಿ ನೀತಿಗೆ ಸಚಿವ ಸಂಪುಟವು ತತ್ವಶಃ ಒಪ್ಪಿಗೆ ನೀಡಿದ್ದು, ಇದನ್ನು ವಿಧಾನಮಂಡಲದ ಎರಡೂ ಸದನದಲ್ಲಿ ಚರ್ಚೆಗಾಗಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಆ) ಕರಡು ಕೃಷಿ ನೀತಿಯಲ್ಲಿ ನೈಸರ್ಗಿಕ ಕೃಷಿ ಪದ್ಧತಿಗೆ ಸೂಕ್ತವಾದ ಆದ್ಯತೆ ನೀಡುವ ಪ್ರಸ್ತಾಪನೆ ಇದೆ.

ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕುಗಳು.

34 - ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕುಗಳ ಸಂಖ್ಯೆ ಎಷ್ಟು? ಅವುಗಳಾವುವು?

ಆ) ಬರಗಾಲ ಪ್ರದೇಶವೆಂದು ಘೋಷಿಸಲು ಅನುಸರಿಸಿದ ಮಾರ್ಗಗಳೇನು?

ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ದಿನಾಂಕ 19-8-1995ರವರೆಗೆ 175 ತಾಲ್ಲೂಕುಗಳ ಪೈಕಿ 70 ತಾಲ್ಲೂಕುಗಳಲ್ಲಿ ಸರಾಸರಿಗಿಂತ ಕಡಿಮೆ ಮಳೆ ಬಿದ್ದಿರುತ್ತದೆ. ಇವುಗಳಲ್ಲಿ 65 ತಾಲ್ಲೂಕುಗಳಲ್ಲಿ ಶೇಕಡಾ 80 ರಿಂದ 40 ರಷ್ಟು ಮತ್ತು 5 ತಾಲ್ಲೂಕುಗಳಲ್ಲಿ ಶೇಕಡ 40ಕ್ಕಿಂತ ಕಡಿಮೆ ಮಳೆ ಬಿದ್ದಿರುತ್ತದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ನಿರ್ದಿಷ್ಟವಾದ ಮಾರ್ಗಸೂಚಿಗಳಾವುವೂ ಇರುವುದಿಲ್ಲ.

ಇ) ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ 5 ತಾಲ್ಲೂಕುಗಳ 320 ಗ್ರಾಮಗಳಲ್ಲಿ ಕಡಿಮೆ ಮಳೆ ಬಿದ್ದಿರುತ್ತದೆ.